OS No. 62/2018

DW-2

**(ಇಂದು ದಿಃ 09-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ವಾದಿ ಪರ ಶ್ರೀ.SKD ವಕೀಲರಿಂದಃ-**

ಕಲ್ಯಾಣಪ್ಪ ನನ್ನ ತಂದೆ. 1 ರಿಂದ 3 ನೇ ಪ್ರತಿವಾದಿಯರು ಒಟ್ಟು ಕುಟುಂಬದಲ್ಲಿ ಒಟ್ಟಾಗಿದ್ದೇವೆ. ಅಸಲು ದಾವಾ ನಂಬರ 21/2020 ರಲ್ಲಿ ಬಸವರಾಜನ ಸಾಕ್ಷಿ ವಿಚಾರಣೆ ಆಗಿದೆ ಎಂದರೆ ಸರಿ. ಈ ಹಿಂದೆ ನಾನು ನನ್ನ ಅಣ್ಣ ಮತ್ತು ನನ್ನ ತಾಯಿ ಸಹಿಗಳನ್ನು ಮಾಡಿ ದಾವೆಯನ್ನು ಡಿಕ್ರಿ ಮಾಡುವಂತೆ ಪ್ರಮಾಣ ಪತ್ರಗಳನ್ನು ಸಲ್ಲಿಸಿದ್ದೇವು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ನೋಡದೆ ಸಹಿ ಮಾಡಿದ್ದೇವು ಎಂದು ಹೇಳುತ್ತಾರೆ. ದಿನಾಂಕ 04.06.2014 ರಂದು ನಿಪಿ-5 ರ ಪ್ರಕಾರ ಅಗ್ರೀಮೆಂಟ್ ಬರೆದುಕೊಟ್ಟು ವಾದಿಯಿಂದ ಚೆಕ್ ಮೂಲಕ ರೂ.18,95,000/- ಹಣ ಪಡೆದುಕೊಂಡಿದ್ದೇವೆ ಎಂದರೆ ಸರಿ. ನಾನು 7ನೇ ತರಗತಿಯವರೆಗೆ ಓದಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನಗೆ ಇಂಗ್ಲೀಷ ಓದಲು ಬರೆಯಲು ಬರುವುದಿಲ್ಲ, ಪ್ರತಿವಾದ ಪತ್ರ ಸಲ್ಲಿಸಲು ವಕೀಲರಿಗೆ ನಾವೇ ಮಾಹಿತಿ ಕೊಟ್ಟಿದ್ದೇವು. ಕಂಪನಿಯವರು ಮುಂದೆ ನೊಂದಾಯಿತ ಖರೀದಿ ಪತ್ರ ಮಾಡಿಕೊಳ್ಳುವಾಗ ಹೆಚ್ಚಿನ ಹಣ ಕೊಡುತ್ತೇವೆ ಎಂದು ಹೇಳಿ ಕಡಿಮೆ ಹಣಕ್ಕೆ ಅಗ್ರೀಮೆಂಟ ಮಾಡಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಸಲು ದಾವಾ ನಂಬರ 21/2020 ನ್ನು ಕಾಂತಬಾಯಿ ಮತ್ತು ಇತರರು ಬಸಮ್ಮ ಮತ್ತು ಇತರರ ಮೇಲೆ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಬಸವರಾಜ PW+ 1 ಎಂದು ಸಾಕ್ಷಿ ನೀಡಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಬಸವರಾಜನ ಸಸಾಕ್ಷಿ ವಿಚಾರಣೆ ತೋರಿಸಲಾಗಿ ಅದು OS No.21/2020 ಕ್ಕೆ ಸಂಬಂಧಪಟ್ಟಿದ್ದು ಎಂದು ನೋಡಿ ಗುರುತಿಸಿದ್ದು , ಅದನ್ನು ನಿಪಿ-13 ಎಂದು ಗುರುತಿಸಲಾಯಿತು. ಹೇಗಾದರು ಮಾಡಿ ವಾದಿಯಿಂದ ಹೆಚ್ಚಿ ನ ಹಣ ಪಡೆದುಕೊಳ್ಳಬೇಕೆಂಬ ದುರದ್ದೇಶದಿಂದ ಸುಳ್ಳು ಪ್ರತಿವಾದ ಪತ್ರ

OS No. 62/2018
DW-2

ಸಲ್ಲಿಸಿ ಸುಳ್ಳು ಸಾಕ್ಷಿ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನ ಿಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 4ನೇ ಪ್ರತಿವಾದಿಯ ಪರ ಶ್ರೀ VJM ವಕೀಲರಿಂದಃ**

ಅಗ್ರೀಮೆಂಟ ಮಾಡಿಕೋಡುವಾಗಿನ ಮತ್ತು ಈಗಿನ ದಾವಾ ಸ್ವತ್ತಿನ ಪಹಣಿ ನೋಡಿದ್ದೇನೆ. ಕಲ್ಯಾಣಪ್ಪ, ದರ್ಮರಾವ್, ನಾಗೇಂದ್ರಪ್ಪ ಈ 3 ಜನರ ಹೆಸರಿನಲ್ಲಿ ತಲಾ 5 ಎಕರೆ ಜಮೀನು ಇದೆ ಎಂದರೆ ಸರಿ. ಅವರ ಹೆಸರಿಗೆ ಯಾವತ್ತಿಗೂ 9 ಎಕರೆ ಜಮೀನಿನ ಪಹಣಿ ಬಂದಿಲ್ಲ ಎಂದರೆ ಸರಿ. ಸದರಿ 9 ಎಕರೆ ಜಮೀನನ್ನು ಮಾರಾಟ ಮಾಡುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸದರಿ 9 ಎಕರೆ ಜಮೀನು ಯಾರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. 9 ಎಕರೆ 19 ಗುಂಟೆಗೆ ನಾವು ಮಾಲೀಕರು ಎಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಕಂಪನಿಗೆ ನಾವು 9 ಎಕರೆ 19 ಗುಂಟೆ ಮಾರಾಟ ಮಾಡಲು ಒಪ್ಪಿ ಬರೆದುಕೊಟ್ಟಿರುವ ಅಗ್ರೀಮೆಂಟ ತಪ್ಪು ಎಂದರೆ ಸರಿಯಲ್ಲ. ನಾವು 9 ಎಕರೆ 19 ಗುಂಟೆ ಜಮೀನಿಗೆ ಮಾಲೀಕರು ಎಂದು ತೋರಿಸಲು ಯಾವುದೇ ಪಹಣಿ, ಮುಟೇಷನ್ ಅಥವ ಸ್ಕೇಚ್ ಹಾಜರುಪಡಿಸಿಲ್ಲ. ಇವತ್ತಿಗೂ ಸರ್ವೆ ನಂಬರ 63 ರಲ್ಲಿ 4 ಎಕರೆ 19 ಗುಂಟೆ ಜಮೀನು ನನ್ನ ಅತ್ತೆ ಮಹಾದೇವಮ್ಮನ ಹೆಸರಿಗೆ ಇದೆ ಎಂದರೆ ಸರಿ. ಕಂಪನಿಗೆ ನಾವು 9 ಎಕರೆ 19 ಗುಂಟೆ ಮಾರಾಟ ಮಾಡಿರುವುದು ಕಾನೂನು ಬಾಹಿರ ಎಂದರೆ ಸರಿಯಲ್ಲ. ಅಗ್ರೀಮೆಂಟ್ ಆಗುವಾಗ ಕಾಲಕ್ಕೆ ಮಹಾದೇವಮ್ಮ ತೀರಿ ಹೋಗಿದ್ದರು ಎಂದರೆ ಸರಿ. ಕಾರಣ ಅವಳ ಹೆಸರಿನಲ್ಲಿದ್ದ 4 ಎಕರೆ 19 ಗುಂಟೆ ಜಮೀನಿಗೆ ಅಗ್ರೀಮೆಂಟ್ ಬರೆದುಕೋಡುವ ಅಧಿಕಾರ ನಮಗೆ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಮತ್ತು ವಾದಿ ಕಂಪನಿಯವರು ಶೇರಿಕಾಗಿ ಸುಳ್ಳು ಅಗ್ರೀಮೆಂಟ್ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್**
**ನ್ಯಾಯಾಧೀಶರು,ಸೇಡಂ.**